ಮಿಸ್ ನಂಃ 6-18
ಆರ್ ಡಬ್ಲ್ಯೂ ಃ 1

ದಿಃ 07-12-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಶ್ರೀಮತಿ ಪಿ ಎ ವಿ ವಕೀಲರಿಂದ

6. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ಬರೆಯಲಾಗಿದೆ ಗೊತ್ತಿಲ್ಲ. ಮೊದಲಿನಿಂದಲೂ ನನ್ನ ಮತ್ತು ಅರ್ಜಿದಾರರ ಮಧ್ಯೆ 12 ರಿಂದ 14 ಮೊಕದ್ದಮೆಗಳು ನಡೆದಿರುತ್ತವೆ ಎಂದರೆ ನಡೆದಿರಬಹುದು ಎಂದು ಹೇಳುತ್ತಾರೆ. ಆ ಮೊಕದ್ದಮೆಗಳಲ್ಲಿ ನನ್ನ ಪರವಾಗಿ ವಕೀಲರನ್ನು ನೇಮಿಸಿಕೊಂಡಿದ್ದೆ. ಒ ಎಸ್ ನಂ 46/1987 ರ ಆದೇಶದ ವಿರುದ್ದ ಮೇಲ್ಮನವಿಗಳು ಇದ್ದವು ಎಂದರೆ ನಿಜ. ಈ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಗಳು ನಡೆದಿದ್ದವು ಎಂದರೆ ನಿಜ, ಸಾಕ್ಷಿ ಮುಂದುವರೆದು ಅವು ವಜಾ ಆಗಿರುತ್ತವೆ ಎಂದು ಹೇಳುತ್ತಾರೆ. ಈ ಅರ್ಜಿಯನ್ನು ಯಾವ ಕಾರಣಕ್ಕಾಗಿ ಹೂಡಿರುತ್ತಾರೆ ನನಗೆ ಗೊತ್ತಿಲ್ಲ, ಆದರೆ ನಮ್ಮ ವಕೀಲರ ಮೂಕಾಂತರ ನಾವು ಬರೆಸಿ ಸಲ್ಲಿಸಿರುತ್ತೇವೆ. ನಾವು ಬರೆಸಿಹಾಕಿರುತ್ತೇವೆ ಎಂಬುದನ್ನು ವಕೀಲರೇ ಬರೆದಿರುತ್ತಾರೆ. 2011 ರವರೆಗೆ ಅರ್ಜಿದಾರರಿಗೆ ಬೇರೆ ವಕೀಲರು ಇದ್ದರು ಎಂದರೆ 40 ವರ್ಷಗಳಿಂದ ಅರ್ಜಿದಾರರು ವಕೀಲರನ್ನು ಬದಲಾಯಿಸುತ್ತಾ ಬಂದಿರುತ್ತಾರೆ ಎಂದು ಹೇಳುತ್ತಾರೆ. ಅರ್ಜಿದಾರರ ಪರವಾಗಿದ್ದ ವಕೀಲರಿಗೆ ಏಟು ಆಗಿದ್ದರಿಂದ ಅವರು ಬೇರೆ ವಕೀಲರನ್ನು ನೇಮಿಸಿಕೊಂಡಿದ್ದರು ಎಂದರೆ ನಿಜ. ಸಾಕಷ್ಟು ಮೊಕದ್ದಮೆಗಳನ್ನು ನ್ಯಾಯಾಲಯದಲ್ಲಿ ಏಕಕಾಲದಲ್ಲಿ ಕರೆದಿದ್ದರಿಂದ ಅರ್ಜಿದಾರರ ವಕೀಲರಿಗೆ ಎಂ ಎ ಮೇಲ್ಮನವಿಯಲ್ಲಿ ಹಾಜರಾಗಲು ಆಗಲಿಲ್ಲ ಆದ ಕಾರಣ ಎಂ ಎ ವಜಾ ಆಗಿತ್ತು ಎಂದರೆ ವಜಾ ಆಗಿತ್ತು ಎಂದು ಹೇಳುತ್ತಾರೆ. ಎಂ ಎ ಮೇಲ್ಮನವಿಯಲ್ಲಿ ಯಾವ ಕಾರಣಕ್ಕಾಗಿ ವಕೀಲರು ಹಾಜರಾಗಲಿಲ್ಲ ಎಂದು ವೈದ್ಯರ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಎಂದರೆ ಅದು ಸುಳ್ಳು ಇರುತ್ತದೆ ಎಂದು ಹೇಳುತ್ತಾರೆ.

7. ಲಕ್ಷ್ಮಮ್ಮರವರು ನನ್ನನ್ನು ಸೇರಿಸಿ ಒ ಎಸ್ ನಂ 193/2005 ನ್ನು ಹೂಡಿದ್ದರು, ಅದು ಹೊಸ ನಂಬರಾಗಿ 21/2014 ಎಂದು ಆಗಿತ್ತು ಎಂದರೆ ಅದಕ್ಕೂ ನನಗೂ ಸಂಬಂದ ಇಲ್ಲ ಎಂದು ಹೇಳುತ್ತಾರೆ. ಈ ಮಾತನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ನಮಗೂ ಅವರಿಗೂ ಸಂಬಂದ ಇಲ್ಲ ಎಂದು ಹೇಳುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯದಲ್ಲಿ 3 ಮೊಕದ್ದಮೆಗಳು ಇದ್ದವು ಎಂದರೆ ನಿಜ, ಸಾಕ್ಷಿ ಮುಂದುವರೆದು ಅವೆಲ್ಲಾ ವಜಾ ಆಗಿರುತ್ತವೆ ಎಂದು ಹೇಳುತ್ತಾರೆ. ಈಗಲೂ ಸಹ ರಾಮನಗರ ನ್ಯಾಯಾಲಯದಲ್ಲಿ ಆರ್ ಎ ನಂ 42/2016 ಮತ್ತು 28/2016 ಚಾಲ್ತಿಯಲ್ಲಿರುತ್ತದೆ ಅವುಗಳಲ್ಲಿ ನಾನು ಸಹ ಪಕ್ಷಗಾರಳಿರುತ್ತೇನೆ ಎಂದರೆ ಅವೆಲ್ಲಾ ವಜಾ ಆಗಿರುತ್ತವೆ ಎಂದು ಹೇಳುತ್ತಾರೆ. ಈ ಎಲ್ಲಾ

ಮೇಲ್ಮನವಿಗಳಲ್ಲಿ ನಾನು ಪಕ್ಷಗಾರಳಾಗಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಮೇಲ್ಮನವಿಗಳು ಒ ಎಸ್ ನಂ 46/1987 ರ ಆಸ್ತಿಗಳು ಮತ್ತು ಪಕ್ಷಗಾರರ ಮಧ್ಯೆ ಇವೆ ಎಂದರೆ ಅವು ವಜಾ ಆಗಿರುತ್ತವೆ ಎಂದು ಹೇಳುತ್ತಾರೆ. ಎಂ ಎ ಮೇಲ್ಮನವಿಯಲ್ಲಿ ಅರ್ಜಿದಾರರು ಹಾಜರುಪಡಿಸಿದ ವೈದ್ಯಕೀಯ ದಾಖಲೆಗಳನ್ನು ನಾನು ಪ್ರಶ್ನೆ ಮಾಡಿಲ್ಲ. ಲಕ್ಷ್ಮಮ್ಮರವರನ್ನು ನಾವು 1987 ರಲ್ಲಿ ಹೂಡಿದ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರಲಿಲ್ಲ ಎಂದರೆ ನಿಜ, ನಮಗೂ ಅವರಿಗೂ ಸಂಬಂದ ಇಲ್ಲ ಎಂದು ಹೇಳುತ್ತಾರೆ. ಈ ಅರ್ಜಿಯನ್ನು ಸರಿಯಾಗಿ ಹಾಕಿದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ನಾನು ಯಾವುದೇ ಮೊಕದ್ದಮೆಯಲ್ಲಿಯೂ ಪೂರ್ತಿ ವಂಶವೃಕ್ಷವನ್ನು ಹಾಜರುಪಡಿಸಿಲ್ಲ ಎಂದರೆ ಎಲ್ಲವೂ ವಜಾ ಆಗಿರುತ್ತವೆ ಎಂದು ಹೇಳುತ್ತಾರೆ. ನಾನು ಪಡೆದ ಡಿಕ್ರಿಗಳಲ್ಲಿ ಪಕ್ಷಗಾರರನ್ನು ಸರಿಯಾಗಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ಆದ ಕಾರಣ ಈ ಅರ್ಜಿ ಸರಿಯಿರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**